# ಆಶಿಕಾ ಎಂಬ ಮುಗುಳುನಗೆ!

ಆಶಿಕಾ ಕನ್ನಡ ಚಿತ್ರರಂಗದಲ್ಲಿ ನಿಧಾನವಾಗಿ ನೆಲೆ ಕಂಡುಕೊಳ್ಳುತ್ತಿರುವ ಚೆಲುವೆ. 'ಕ್ರೇಜಿಬಾಯ್' ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಆಶಿಕಾ, ಚಿತ್ರರಸಿಕರ ಗಮನಸೆಳೆದದ್ದು 'ಮುಗುಳುನಗೆ' ಚಿತ್ರದ ಮೂಲಕ. ಯೋಗರಾಜ್ ಭಟ್ ನಿರ್ದೇಶನದ 'ಮುಗುಳುನಗೆ' ಚಿತ್ರದಲ್ಲಿ ಆಶಿಕಾ ನಟಿಯಾಗಿ ಪಳಗುವ ಸೂಚನೆ ನೀಡಿದ್ದರು.

'ರಾಜು ಕನ್ನಡ ಮೀಡಿಯಂ' ಆಶಿಕಾ ನಟನೆಯ ಹೊಸ ಸಿನಿಮಾ. ಟ್ರೇಲರ್‌ಗಳಿಂದಲೇ ಗಮನಸೆಳೆದಿರುವ ಈ ಚಿತ್ರದ ಶೂಟಿಂಗ್ ಈಗಾಗಲೇ ಮುಗಿದಿದ್ದು, ಚಿತ್ರ ತೆರೆಕಾಣುವ ಹಂತದಲ್ಲಿದೆ. ಈ ಚಿತ್ರದಲ್ಲಿ ಆಶಿಕಾ ಅವರದು ಹೈಸ್ಕೂಲು ಹುಡುಗಿಯ ಪಾತ್ರ.

ಕನ್ನಡ ಮೀಡಿಯಂ ಹುಡುಗನಾಗಿ ಗುರುನಂದನ್ ನಟಿಸಿದ್ದಾರೆ. ಚಿತ್ರದ ನಾಯಕಿ ಆವಂತಿಕಾ ಶೆಟ್ಟಿಯಾದರೂ, ಆಶಿಕಾಗೆ ಕೂಡ ಚಿತ್ರದಲ್ಲಿ ನಾಯಕಿಯಷ್ಟೇ ಅವಕಾಶ ಇದೆಯಂತೆ. ಮಲೆನಾಡಿನ ಶಾಲೆಯೊಂದರಲ್ಲಿ ನಡೆಯುವ ಲವ್ ಸ್ಟೋರಿಯಲ್ಲಿನ ನಾಯಕಿ ಪಾತ್ರ ಅವರದು. ಶಾಲಾ ಯೂನಿಫಾರ್ಮ್‌ನಲ್ಲಿ ಗುರು ಜೊತೆ ಆಶಿಕಾ ಶಾಲಾದಿನಗಳ ಮಜೆಯನ್ನು ಮತ್ತೆ ಅನುಭವಿಸಿದ್ದಾರಂತೆ.

ನರೇಶ್ ನಿರ್ದೇಶನದ 'ರಾಜು ಕನ್ನಡ ಮೀಡಿಯಂ' ಬೇರೆ ಬೇರೆ ಕಾರಣಗಳಿಗಾಗಿ ಈಗಾಗಲೇ ಚಿತ್ರರಸಿಕರ ಗಮನಸೆಳೆದಿದೆ. 'ಫಸ್ಟ್ ರ್ಯಾಂಕ್ ರಾಜು' ಯಶಸ್ವಿ ಚಿತ್ರದ ನಿರ್ದೇಶಕ ಹಾಗೂ ನಾಯಕ ಈ ಚಿತ್ರದಲ್ಲಿ ಮತ್ತೆ ಒಟ್ಟಿಗೆ ಕೆಲಸ ಮಾಡಿದ್ದಾರೆ. ಸುದೀಪ್ ಮುಖ್ಯ ಪಾತ್ರವೊಂದರಲ್ಲಿ ನಟಿಸಿರುವುದು ಸಿನಿಮಾದ ಮತ್ತೊಂದು ವಿಶೇಷ. ಸಾಧು ಕೋಕಿಲಾ, ಚಿಕ್ಕಣ್ಣ, ಸಾಧು ಕೋಕಿಲಾ ತಾರಾಗಣದಲ್ಲಿರುವ ಪ್ರಮುಖರು.





# ಬದುಕಿನ ಅರ್ಥ ಹುಡುಕುತ್ತ...

ಬದುಕಿನ ಉದ್ದೇಶ ಏನು? ಯುವ ನಿರ್ದೇಶಕ ಶ್ರೇಯಸ್ ಅವರ 'ಸರ್ವಸ್ವ' ಸಿನಿಮಾದ ಉದ್ದೇಶವೇ ಬದುಕಿನ ಅರ್ಥವಂತಿಕೆಯನ್ನು ಶೋಧಿಸುವುದು. ಚಿತ್ರರಂಗದ ಬಗ್ಗೆ ಆಸಕ್ತಿಯುಳ್ಳ ನಾಲ್ಕು ಪಾತ್ರಗಳ ಮೂಲಕ ಬದುಕಿನ ಸಾರಸರ್ವಸ್ವನ್ನು ಅರ್ಥೈಸುವ ಕೆಲಸವನ್ನು ಅವರು ಮಾಡಿದ್ದಾರೆ.

'ಸರ್ವಸ್ವ' ಸಿನಿಮಾ ಒಂದು ರೀತಿಯಲ್ಲಿ ಸಿನಿಮಾದ ಮೂಲಕ ಸಿನಿಮಾವನ್ನು ಕಟ್ಟುವ ಪ್ರಯತ್ನ. ಚಿತ್ರದ ನಾಯಕನದು ಸಿನಿಮಾದಲ್ಲಿ ನಿರ್ದೇಶಕನ ಪಾತ್ರ. ಸಿನಿಮಾ ಮಾಡುವ ಪ್ರಯತ್ನದಲ್ಲಿ ಬದುಕಿನ ದರ್ಶನವನ್ನು ಕಾಣಿಸುವ ಸೂತ್ರಧಾರನ ಪಾತ್ರದಲ್ಲಿ ತಿಲಕ್ ನಟಿಸಿದ್ದಾರೆ. ಋಣಾತ್ಮಕ ಛಾಯೆಯ ಹಾಗೂ ಒರಟು ಪಾತ್ರಗಳಲ್ಲಿಯೇ ಹೆಚ್ಚು ಕಾಣಿಸಿಕೊಂಡಿರುವ ತಿಲಕ್, ಸಂಕೀರ್ಣ ಪಾತ್ರವೊಂದರಲ್ಲಿ ಕಾಣಿಸಿಕೊಂಡಿರುವ ಖುಷಿಯಲ್ಲಿದ್ದಾರೆ.

ಶ್ರೇಯಸ್ ತಮ್ಮ ಚಿತ್ರಕ್ಕೊಂದು ರಮಣೀಯ ಚೌಕಟ್ಟು ತೊಡಿಸುವ ಪ್ರಯತ್ನವನ್ನೂ ಮಾಡಿದ್ದಾರೆ. ಕರಾವಳಿಯ ಸುಂದರ ಪರಿಸರವನ್ನು ಚಿತ್ರದಲ್ಲಿ ಕಲಾಕೃತಿಯ ರೂಪದಲ್ಲಿ ತೋರಿಸಲಾಗಿದೆಯಂತೆ. ಸಂಗೀತ ಸಿನಿಮಾದ ಮತ್ತೊಂದು ಆಕರ್ಷಣೆ. 'ಸಂಗೀತ ಪ್ರಧಾನ ಸಿನಿಮಾ ಎನ್ನುವಮಟ್ಟಿಗೆ ತಮ್ಮ ಚಿತ್ರದಲ್ಲಿ ಸಂಗೀತಕ್ಕೆ ಪ್ರಾಧಾನ್ಯತೆ ನೀಡಲಾಗಿದೆ' ಎನ್ನುತ್ತಾರೆ ಶ್ರೇಯಸ್. ಭೂಪಿಂದರ್ ಪಾಲ್ ಸಿಂಗ್ ಛಾಯಾಗ್ರಹಣ ಹಾಗೂ ಶ್ರೀಧರ್ ಸಂಭ್ರಮ್ ಸಂಗೀತ ಚಿತ್ರಕ್ಕಿದೆ. ರನುಷಾ ಚಿತ್ರದ ನಾಯಕಿ. ಚೇತನ್ ವರ್ಧನ್, ಸಾತ್ವಿಕಾ ಅಪ್ಪಯ್ಯ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.